ಬರುವುದೋ ಬೇಡವೋ ಎಂಬ ದ್ವಂದ್ವದಲ್ಲಿ ಮೇಲೆ ಕೆಳಗೆ ಅಡ್ಡಾಡುತ್ತಿದ್ದ. ಅವನು ದಷ್ಟಪುಷ್ಟನಾಗಿದ್ದು ತಲೆಯ ಮೇಲೆ ಹ್ಯಾಟು ಮತ್ತು ಕೈಗಳಿಗೆ ರೇಷ್ಮೆಯ ಗವಸುಗಳನ್ನು ತೊಟ್ಟಿದ್ದ. ಕೊನೆಗೂ ಗೇಟನ್ನು ತೆರೆದು ಅವನು ಒಳಗೆ ಬಂದ. ಮಿಸೆಸ್ ವೈಟ್ ಮೈಮೇಲಿದ್ದ ಏಪ್ರನನ್ನು ಕುರ್ಚಿಯ ಮೇಲೆ ಇಟ್ಟು ಅವನನ್ನು ಎದುರುಗೊಳ್ಳಲು ಸಜ್ಜಾದಳು.

ಹಿಂಜರಿಯುತ್ತಿದ್ದ ಆ ಆಗಂತುಕನ್ನು ಒಳಗೆ ಆಹ್ವಾನಿಸಿದಳು. ಮನೆ ಅಸ್ತವ್ಯಸ್ತವಾಗಿ ಇದ್ದುದಕ್ಕಾಗಿ ವಿಷಾದಿಸುತ್ತಾ ಅವನನ್ನು ಕುಳಿತುಕೊಳ್ಳಲು ಹೇಳಿದಳು. ಬಂದ ವ್ಯಕ್ತಿ ತುಂಬಾ ಹೊತ್ತು ಏನೂ ಮಾತನಾಡಲಿಲ್ಲ. ಅವರೂ ಕಾಯುತ್ತಾ ನಿಂತರು.

'ನಾನು 'ಮಾವ್ ಮತ್ತು ಮೆಗ್ಗಿನ್ಸ್' ಕಂಪನಿಯಿಂದ ಬಂದಿದ್ದೇನೆ... ಅಂದರೆ, ನನಗೆ ಕಳುಹಿಸಿದ್ದಾರೆ...' ಅವನು ತೊದಲುತ್ತಾ ಹೇಳಿದ.

'ಯಾಕೆ? ಏನಾಯ್ತು? ನನ್ನ ಮಗ ಹರ್ಬರ್ಟ್ ಹುಶಾರಾಗಿದ್ದಾನೆ ತಾನೆ? ಅವನಿಗೇನಾದ್ರೂ?...' ಮಿಸೆಸ್ ವೈಟ್ ಆತಂಕಗೊಂಡು ಒಂದರ ಹಿಂದೆ ಒಂದು ಪ್ರಶ್ನೆ ಕೇಳತೊಡಗಿದಳು.

'ಲೇ... ಸ್ವಲ್ಪ ಸಾವಧಾನದಿಂದಿರೆ, ಏನೆಲ್ಲಾ ಕಲ್ಪಿಸಿಕೊಂಡು ಬಾಯಿಗೆ ಬಂದ ಹಾಗೆ ಮಾತನಾಡಬೇಡ...' ಮಿಸ್ಟರ್ ವೈಟ್ ಹೆಂಡತಿಗೆ ಗದರಿಸುತ್ತಾ, ಆಗಂತುಕನ ಕಡೆಗೆ ತಿರುಗಿದ.

'ನೀವು ಯಾವುದೇ ಕೆಟ್ಟ ಸುದ್ದಿಯನ್ನು ತಂದಿಲ್ಲವೆಂದು ಭಾವಿಸುತೇನೆ ಸರ್...' ಎಂದ. ಅವನ ದನಿಯೂ ಕಂಪಿಸುತ್ತಿತ್ತು. ಅವನ ಕಣ್ಣುಗಳು ಅಪರಿಚಿತನ ಕಣ್ಣುಗಳನ್ನು ಹುಡುಕುತ್ತಿದ್ದವು.

ಆಗಂತುಕ ಏನು ಹೇಳುವುದೆಂದು ತೋಚದೆ ಕೃತಕ ಕೆಮ್ಮು ಕೆಮ್ಮುತ್ತಾ, 'ನನ್ನನ್ನು ಕ್ಷಮಿಸಿ!' ಎಂದ.

'ನನ್ನ ಮಗ ಗಾಯಗೊಂಡಿದ್ದಾನೆಯೇ?' ಮಿಸೆಸ್ ವೈಟ್ ಅರಚಿದಳು.

'ಹೌದು. ಹರ್ಬರ್ಟ್ ತುಂಬಾ ಗಾಯಗೊಂಡಿದ್ದಾನೆ. ಆದರೆ ಅವನು ಯಾವುದೇ ನೋವುಣ್ಣುವ ಸ್ಥಿತಿಯಲ್ಲಿಲ್ಲ.'

'ಸದ್ಯ. ಆ ದೇವರಿಗೆ ಕೃತಜ್ಞತೆಗಳು...' ಆಕೆ ಶಿಲುಬೆಯ ಗುರುತನ್ನು ತೆಗೆಯುತ್ತಾ ಕೈ ಜೋಡಿಸಿದಳು. ಮರುಕ್ಷಣದಲ್ಲೇ, ಗಾಬರಿಯಿಂದ ಅವಳ ಕಣ್ಣುಗಳು ಹಿರಿದಾದವು. ಆಗಂತುಕನ ಮಾತುಗಳು ಸಾವಕಾಶವಾಗಿ ಅವಳ ತಲೆಯೊಳಗೆ ಇಳಿದವು. ಆಗಂತುಕ ಮೆಲ್ಲನೆ ತನ್ನ ಮುಖವನ್ನು ಪಕ್ಕಕ್ಕೆ ಸರಿಸಿದ. ಅವಳ ಉಸಿರು ಸಾವಕಾಶವಾಗಿ ಸಹಜ ಸ್ಥಿತಿಗೆ ಬಂದಿತು. ಅವಳು ತನ್ನ ಗಂಡನ ಕಡೆಗೆ ತಿರುಗಿ ಅವನ ಕೈಯನ್ನು ತನ್ನ ಕೈಯಲ್ಲಿರಿಸಿದಳು. ಅಲ್ಲಿ ಗಾಢಮೌನ ತುಂಬಿಕೊಂಡಿತು.

'ಅವನು ಮಷಿನಿಗೆ ಸಿಕ್ಕಿಹಾಕಿಕೊಂಡ...' ಎಷ್ಟೋ ಸಮಯದ ನಂತರ ಆಗಂತುಕ ಗುಟ್ಟಲ್ಲಿ ಎಂಬಂತೆ ಪಿಸು ಮಾತಿನಲ್ಲಿ ಹೇಳಿದ.

'ಮಷಿನಿಗೆ ಸಿಕ್ಕಿಹಾಕಿಕೊಂಡ!' ಆಗಂತುಕ ನಿರ್ಭಾವುಕ ದನಿಯಲ್ಲಿ ಹೇಳಿದ್ದನ್ನು ಮಿಸ್ಟರ್ ವೈಟ್ ಮತ್ತೊಮ್ಮೆ ತನ್ನಷ್ಟಕ್ಕೆ ಹೇಳಿಕೊಂಡ. ಹೆಂಡತಿಯ ಕೈಯನ್ನು ಗಟ್ಟಿಯಾಗಿ ಹಿಡಿದುಕೊಂಡು ಅವನು ಕಿಟಕಿಯ ಹೊರಗೆ ನೋಡತೊಡಗಿದ. ನಲ್ವತ್ತು ವರ್ಷಗಳ ಹಿಂದೆ ಪರಿಚಯವಾದ ಹೊಸತರಲ್ಲಿ ಅವರು ಹೀಗೆಯೇ ಗಂಟೆಗಟ್ಟಲೆ ಕೂತಿರುತ್ತಿದ್ದರು.

'ಹರ್ಬರ್ಟ್‌ನೊಬ್ಬನೇ ನಮ್ಮ ಸರ್ವಸ್ವನಾಗಿದ್ದ. ಇದನ್ನು ಎದುರಿಸಲು ನಮಗೆ ತುಂಬಾ ಕಷ್ಟವಾಗುತ್ತದೆ.' ಅವನು ಅಪರಿಚಿತನಿಗೆ ಹೇಳಿದ.